# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಬೊಉ/ಪಿಆರ್/ 132 /2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಬೊಮ್ಮನಹಳ್ಳಿ ಉಪವಿಭಾಗ
ಕೋಡಿಚಿಕ್ಕನಹಳ್ಳಿ ಮುಖ್ಯರಸ್ತೆ, ಬಿಳೇಕಹಳ್ಳಿ
ಬೆಂಗಳೂರು-560076. ದಿನಾಂಕ: 08/10/2021

## 188 ಬಿಳೇಕಹಳ್ಳಿ ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ದಿನಾಂಕ:- 08/10/2021 ಬೆಳಿಗ್ಗೆ 10:30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಶ್ರೀ ಅಂಜಿನಪ್ಪ ಸಿ.ಟಿ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ನಡವಳಿಗಳು.

### ವಾರ್ಡ್ ಸಮಿತಿಯ ಹಾಜರಾದ ಸದಸ್ಯರು:-

1. ಶ್ರೀ ಅಂಜಿನಪ್ಪ ಸಿ.ಟಿ – ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಉಮೇಶ್ ಕೆ.ಪಿ – ಕಾರ್ಯದರ್ಶಿಗಳು ಹಾಗೂ ಸಹಯಕ ಅಭಿಯಂತರರು ವಾರ್ಡ್-188
3. ಶ್ರೀ ಸುರೇಶ್ ಪ್ರಕಾಶ್ – ರಂಕಾ ಕಾಲೋನಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು.
4. ಶ್ರೀ ಶೃತಿ ರಾವ್ – ಸಾರ್ವಭೌಮ ನಗರ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು.

### ವಾರ್ಡ್ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳು:-

1. ಡಾ. ಕೃಷ್ಣಪ್ಪ – ಪಿ.ಎಚ್.ಸಿ ಕೆ.ಸಿ ಹಳ್ಳಿ.
2. ಶ್ರೀ ಅಮಿತ್ ಕುಮಾರ್ – ಸಹಾಯಕ ಅಭಿಯಂತರರು (BESCOM).
3. ಶ್ರೀ ರಮೇಶ್ – ಕಂದಾಯ ಪರಿವೀಕ್ಷಕರು.
4. ಶ್ರೀ ಪ್ರಕಾಶ್ – ಆರೋಗ್ಯ ಪರಿವೀಕ್ಷಕರು.
5. ಶ್ರೀ ಹನುಮಂತರಾಯ – ತೋಟಗಾರಿಕೆ ಇಲಾಖೆ.
6. ಶ್ರೀ ಎನ್. ನಾಗಭೂಷನ್ – ಸಮಾಜ ಕಲ್ಯಾಣ ಇಲಾಖೆ. (ARO)
7. ಶ್ರೀ ಮಹೇಶ್ – ಅರಣ್ಯ ಇಲಾಖೆ.
8. ಶ್ರೀ ಜಯಪ್ರಕಾಶ್ ಬಿ.ಕೆ – ಸಹಾಯಕ ಅಭಿಯಂತರರು (BWSSB).

ಶ್ರೀ ಅಂಜಿನಪ್ಪ ಸಿ.ಟಿ ನೋಡಲ್ ಅಧಿಕಾರಿ ವಾರ್ಡ್-188 ಬಿಳೇಕಹಳ್ಳಿ ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ ವಾರ್ಡ್‌ನ ಕುಂದು ಕೊರತೆಗಳನ್ನು ಚರ್ಚಿಸುವುದಾಗಿ ತಿಳಿಸಿದರು.

- **ಬೃಹತ್ ನೀರುಗಾಲುವೆ ಬಗ್ಗೆ**

  ಬೃಹತ್ ನೀರುಗಾಲುವೆಯ ಸಹಾಯಕ ಅಭಿಯಂತರರು ಗೈರಾದ ಕಾರಣ ಸದರಿ ಬೃಹತ್ ನೀರುಗಾಲುವೆಯ ವಿಷಯದ ಬಗ್ಗೆ ಚರ್ಚೆಯಾಗಿರುವುದಿಲ್ಲ.

- **ಬೀದಿ ದೀಪ ನಿರ್ವಹಣೆ ಬಗ್ಗೆ.**

  ರಂಕಾ ಕಲೋನಿಯ ಮುಖ್ಯರಸ್ತೆಯಲ್ಲಿರುವ ಬೀಧಿದೀಪ ಕಂಬಗಳಿಗೆ ಅನಧಿಕೃತವಾಗಿ ಓ.ಎಫ್.ಸಿ ಕೇಬಲ್ ಹಗೂ ಇತ್ಯಾದಿ ಕೇಬಲ್‌ಗಳನ್ನು ತೆರೆಯುವ ಸಂಬಂಧ ಸಭೆಯಲ್ಲಿ ವಾರ್ಡಿನ ಸದಸ್ಯರು ಶ್ರೀ ಸುರೇಶ್ ಪ್ರಕಾಶ್ ರವರು ತಿಳಿಸಿದರು.

  ವಾರ್ಡ್ ಸದಸ್ಯರಾದ ಶ್ರೀಮತಿ ಶೃತಿ ರಾವ್ ರವರು ಸಾರ್ವಭೌಮನಗರದ, 1ನೇ ಮುಖ್ಯರಸ್ತೆಯಲ್ಲಿ ಬರುವ 1ನೇ ಹಾಗೂ 4ನೇ ಅಡ್ಡರಸ್ತೆ ಹಾಗೂ 2ನೇ ಮುಖ್ಯರಸ್ತೆಯಲ್ಲಿ ಬರುವ 4ನೇ ಅಡ್ಡರಸ್ತೆಗಳಲ್ಲಿ ಬೀದಿ ದೀಪಗಳು ದುರಸ್ಥಿಗೊಂಡು ಕಾರ್ಯನಿರ್ವಹಿಸದೆ ಇರುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಈ ವಿಷಯದ ಸಂಬಂಧ ನೋಡಲ್ ಅಧಿಕಾರಿಯವರು ಬಿ.ಬಿ.ಎಂ.ಪಿ ವಿದ್ಯುತ್ ವಿಭಾಗದ ಅಧಿಕಾರಿಗಳು ಮತ್ತೊಮ್ಮೆ ಗೈರಾದ ಕಾರಣ ಸದರಿಯವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಈ ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸುವಂತೆ ಕಾರ್ಯದರ್ಶಿಗಳಿಗೆ ತಿಳಿಸಿರುತ್ತಾರೆ.

- **ಕಸ ಸಮಸ್ಯೆ ಮತ್ತು ನಿರ್ವಹಣೆ ಬಗ್ಗೆ**

  ರಂಕಾ ಕಾಲೋನಿಯ ಮುಖ್ಯರಸ್ತೆಯಲ್ಲಿ ಬರುವ ಖಾಲಿ ನಿವೇಶನದಲ್ಲಿರುವ ಡೆಬ್ರೀಸ್ ತೆಗೆಯಬೇಕಾಗಿ ವಾರ್ಡ್ ಸದಸ್ಯರಾದ ಶ್ರೀ ಸುರೇಶ್ ಪ್ರಕಾಶ್ ರವರು ತಿಳಿಸಿದರು. ಸದರಿ ವಿಷಯದ ಸಂಬಂಧ ನೋಡಲ್ ಅಧಿಕಾರಿಗಳು ಆರೋಗ್ಯ ಪರಿವೀಕ್ಷಕರಾದ ಶ್ರೀ ಪ್ರಕಾಶ್ ರವರಿಗೆ ಸೂಚಿಸಿದರು.

Scanned with CamScanner

- **ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಮಸ್ಯೆಗಳ ಬಗ್ಗೆ**

ಹಿಂದಿನ ಸಭೆಯಲ್ಲಿ ವಾರ್ಡ್ ಸದಸ್ಯರಾದ ಶ್ರೀಮತಿ ಶೃತಿ ರಾವ್ ರವರು ಸಾರ್ವಭೌಮನಗರದ, 1ನೇ ಮುಖ್ಯರಸ್ತೆಯಲ್ಲಿ ಬರುವ 1ನೇ ಹಾಗೂ 2ನೇ ಅಡ್ಡರಸ್ತೆ ಹಾಗೂ 2ನೇ ಮುಖ್ಯರಸ್ತೆಯಲ್ಲಿ ಬರುವ 3ನೇ ಅಡ್ಡರಸ್ತೆಗಳಲ್ಲಿ ಮ್ಯಾನ್‌ಹೋಲ್‌ಗಳಿಂದ ಒಳಚರಂಡಿ ನೀರು ರಸ್ತೆ ಮೇಲೆ ಹುಕ್ಕಿ ಹರಿಯುತ್ತಿರುವದಾಗಿ ತಿಳಿಸಿರುವ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿ ಸದರಿ ದೂರಿನ ಬಗ್ಗೆ ಕ್ರಮವಹಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

ರಂಕಾ ಕಾಲೋನಿ, ವಿಜಯಾ ಎನ್‌ಕ್ಲೇವ್ ಅಪಾರ್ಟ್‌ಮೆಂಟ್ ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಸಬ್‌ಮೈನ್ ಪೈಪ್‌ನಲ್ಲಿ ಹೂಳು ತುಂಬಿಕೊಂಡಿರುವುದರಿಂದ ಸದರಿ ಸ್ಥಳಗಳಲ್ಲಿ ಒಳಚರಂಡಿ ನೀರು ನುಗ್ಗುತ್ತಿರುವುದರ ಬಗ್ಗೆ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರಾದ ಶ್ರೀ ಸತೀಶ್ ಕುಮಾರ್ ರವರು ಪ್ರತಿಕ್ರಯಿಸಿ ಸಬ್‌ಮೈನ್‌ನಲ್ಲಿ ಹೂಳು ತೆಗೆಯುವ ಕಾಮಗಾರಿಯು ಪ್ರಗತಿಯಲ್ಲಿದ್ದು 3 ತಿಂಗಳುಗಳಲ್ಲಿ ಪೂರ್ಣಗೊಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

- **ಅರಣ್ಯ ಇಲಾಖೆಯ ವಿಷಯಗಳ ಬಗ್ಗೆ.**

ವಿಜಯ ಎನ್‌ಕ್ಲೇವ್, ವಿಜಯಾ ಬ್ಯಾಂಕ್ ಕಾಲೋನಿಯಲ್ಲಿ ಮರದ ಕೊಂಬೆಯು ವಿದ್ಯುತ್ ಕಂಬಕ್ಕೆ ಅಳವಡಿಸಿದ ಟ್ರಾನ್ಸ್‌ಫಾರ್ಮರ್ ಮೇಲೆ ಬೀಳುವ ಸಂಬಂಧವಿದ್ದು ಸಂಬಂಧಪಟ್ಟ ಅರಣ್ಯ ಅಧಿಕಾರಿಗಳಿಗೆ ಮರದ ಕೊಂಬೆಯನ್ನು ತೆರವುಗೊಳಿಸಲು ತಿಳಿಸಿದರು. ಈ ವಿಷಯದ ಸಂಬಂಧ ಸಭೆಯಲ್ಲಿ ಹಾಜರಿದ್ದ ಅರಣ್ಯ ಇಲಾಖೆಯವರಾದ ಶ್ರೀ ಮಹೇಶ್ ರವರು ಕೊಂಬೆಯನ್ನು ತೆರವುಗೊಳಿಸುವ ಸಂಬಂಧ ಸಂಬಂಧಪಟ್ಟ ಸ್ವತ್ತಿನ ಮಾಲೀಕರು ಸ್ವತ್ತಿನ ದಾಖಲೆಗಳೊಂದಿಗೆ ಅರಣ್ಯ ಇಲಾಖೆಗೆ ಅರ್ಜಿಸಲ್ಲಿಸಿದ ನಂತರ ಕ್ರಮಜರುಗಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
8/10/2024

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.

Scanned with CamScanner